Chapter-6

# ಅಧ್ಯಾಯ-6

# ಉತ್ತರಕನ್ನಡದ ಸಾಂಪ್ರದಾಯಿಕ ರಂಗಭೂಮಿಯ ಲಕ್ಷಣಗಳು.

## ಉತ್ತರ ಕನ್ನಡದ ಸಾಂಪ್ರದಾಯಿಕ ರಂಗಭೂಮಿಯ ಲಕ್ಷಣಗಳು

1. ಉತ್ತರ ಕನ್ನಡದ ಸಾಂಪ್ರದಾಯಿಕ ರಂಗ ಕಲೆಗಳ ಮುಖ್ಯ ಅಭಿವ್ಯಕ್ತಿ ವಿಧಾನ ಆಂಗಿಕಾಭಿನಯದ್ದು. ಪದಗಳ ಅರ್ಥವನ್ನು ವರ್ಣಿಸುವ ಕೋಲು ಕುಣಿತವಾಗಲಿ, ಇತರ ನೃತ್ಯಗಳಾಗಲೀ , ಯಕ್ಷಗಾನವಾಗಲಿ ಮುಖ್ಯವಾಗಿ ದೇಹ ಭಾಷೆಯನ್ನು ಬಳಸಿಕೊಳ್ಳುತ್ತದೆ. ದೇಹ ಭಾಷೆಯನ್ನು ಕಲಾತ್ಮಕವಾಗಿ ಬಳಸುವ ವಿಶೇಷವಾದ ವಿಧಾನಗಳಿಗೆ ಸಿಂಹನೃತ್ಯ , ಪ್ರೇತನೃತ್ಯಗಳು ಉದಾಹಾರಣೆಯಾಗಿ ನಿಲ್ಲುತ್ತವೆ.
2. ಇಲ್ಲಿಯ ಕಲೆಗಳು ಪ್ರದರ್ಶನವಾಗಲು ಅಪಾರ ದೈಹಿಕ ಸಾಮರ್ಥ್ಯ ಅಗತ್ಯ . ಮೌನವಾಗಿ ಕುಣಿಯುವ ಹೂವಿನ ಮಕ್ಕಳ ಕುಣಿತ, ಹೊಯ್ಲಿನ ಕೂಗೊಂದನ್ನು ಬಿಟ್ಟರೆ ಬೇರೆ ಪದ್ಯಗಳಿಲ್ಲದೇ ಕುಣಿಯುವ ಸುಗ್ಗಿ ಕುಣಿತ, ಕೋಲು ಹಿಡಿದು ಪದಾಭಿನಯ ಮಾಡುವ ಕೋಲಾಟ , ವಾದ್ಯದ ಜೊತೆ ಪೈಪೋಟಿಗಿಳಿಯುವ ಅಪಾರ ಜಿಗಿತವುಳ್ಳ ಗೊಂಡರ ಕುಣಿತ , ತಿಂಗಳುಗಟ್ಟಲೆ ರಿಹರ್ಸಲ್ ಮಾಡಿ , ರಾತ್ರಿಯಿಂದ ಬೆಳ್ಳಂಬೆಳತನಕ ಕುಣಿಯುವ ಬೇಡರ ವೇಷ , ಆಂಗಿಕಾಭಿನಯದ ಪ್ರಾಧಾನ್ಯತೆಯಿಂದಲೇ ಕಥಾನಕಗಳನ್ನು ನಿರೂಪಿಸುವ ಯಕ್ಷಗಾನ, ತೀವ್ರಗತಿಯ ಚಲನೆಯ ಡಮಾಮಿ, ಗುಮಟೆವಾದನ ಇವೆಲ್ಲ ಅಪಾರ ದೈಹಿಕ ಕಸುವನ್ನು ಬಯಸುತ್ತದೆ.
3. ದೇಹದ ಕೆಳಭಾಗಗಳಾದ , ಸೊಂಟ ಮತ್ತು ಕಾಲುಗಳು ಮತ್ತು ಪಾದಗಳು ನರ್ತನದಲ್ಲಿ ಹೆಚ್ಚು ಪಾಲ್ಗೊಳ್ಳುತ್ತವೆ. ಕರಾವಳಿಯ ತೀರ ಮೆತ್ತಗೂ ಅಲ್ಲದ, ಬಿರುಸೂ ಅಲ್ಲದ ಮರಳು ಮಿಶ್ರಿತ ಕೆಂಪು ಮಣ್ಣು ನೆಲವನ್ನು ಬಡಿದು ಜಿಗಿಯುವ, ತೀವ್ರವಾಗಿ ಚಲಿಸುವ ಪಾದಗತಿಗಳಿಗೆ ತುಂಬ ಅನುಕೂಲಕರವಾಗಿದೆ. ವರ್ತುಲ , ಅರ್ಧವರ್ತುಲ, ಸರಪಣಿಯಾಕಾರದ ಹೀಗೆ ವಕ್ರಗತಿಯ ವಿವಿಧ ವಿನ್ಯಾಸದಲ್ಲಿ ಪಾದಗಳು ಹೆಚ್ಚು ಬಳಕೆಗೊಳ್ಳುತ್ತವೆ.
4. ಕಲೆಗಳಲ್ಲಿ ತುಂಬ ಸರಳವಾದ ಅಲಂಕರಣ ವಿಧಾನಗಳಿವೆ. ಪರಿಕರಗಳು ಸಹ ಸರಳ, ಆಹಾರ್ಯಕ್ಕೆ ಸಂಬಂಧಿಸಿದ ವೈಭವಯುತ ವೇಷ ವಿನ್ಯಾಸಗಳು ಹೆಚ್ಚಾಗಿ ಕಂಡುಬರುವುದಿಲ್ಲ . ಬೇಡರ ವೇಷ, ಸಿಂಹ ಮತ್ತು ಪ್ರೇತ ನೃತ್ಯಗಳು ಬಿಟ್ಟರೆ , ವೇಷ ಪ್ರಧಾನವಾದ ಹಗರಣಗಳು ಸಹ ಸರಳಆಹಾರ್ಯಗಳನ್ನು ಬಳಸಿಕೊಳ್ಳುತ್ತವೆ.

5. ಇಲ್ಲಿಯ ಕಲೆಗಳು ಹೆಚ್ಚು ಪರಿಷ್ಕಾರಕ್ಕೆ ಒಳಗಾಗಿವೆ, ಯಕ್ಷಗಾನದಂತಹ ಕಲೆಗಳು ನಾಟ್ಯಶಾಸ್ತ್ರದಿಂದಲೇ

ಉಗಮಿಸಿರಬಹುದೇನೋ ಎಂದು ಭಾಸವಾಗುವಷ್ಟು ಸಂಸ್ಕೃತೀಕರಣಗೊಂಡಿದೆ. ಕಲೆಗಳು ಮೂಡಿ ಬಂದ ಪರಿಸರವನ್ನು ಅದರ ಜೀವನ ದೃಷ್ಟಿಯನ್ನು ಅಭ್ಯಸಿಸಲು, ಅವುಗಳ 'ಬೇರು'ಗಳನ್ನು ಅಧ್ಯಯನ ಮಾಡಲು ಸಾಧ್ಯವಿಲ್ಲದಷ್ಟು ಅವು ಪರಿಷ್ಕರಣಕ್ಕೆ ಒಳಗಾಗಿದೆ. ಯಕ್ಷಗಾನವು ಸುಗ್ಗಿಯೇ ಮೊದಲಾದ ನೃತ್ಯಗಳಿಂದ ಪ್ರಭಾವಿತವಾಗಿದ್ದರೆ, ಸುಗ್ಗಿ ಕುಣಿತಗಳು, ಹಗಣಗಳು ಯಕ್ಷಗಾನ ವೇಷವನ್ನೇ ಧರಿಸಿ ಬರುತ್ತಿವೆ. ಪರಸ್ಪರ ಪ್ರಭಾವ , ಪ್ರಯೋಗಗಳಿಗೆ ಅನುವು ಮಾಡಿಕೊಂಡ ಈ ಕಲೆಗಳು ತಮ್ಮ ಜೀವನ ಸಂಬಂಧಿ ಆಚರಣೆಗಳಿಂದ ದೂರವಾಗುತ್ತ ಪ್ರದರ್ಶನೀಯತೆಯನ್ನು ಹೆಚ್ಚಿಸಿಕೊಂಡಿದೆ. ಮತ್ತು ಅಧ್ಯಯನದ ದೃಷ್ಟಿಯಿಂದ ತುಂಬ ಸಂಕೀರ್ಣವಾಗಿದೆ.

6. ಉತ್ತರ ಕನ್ನಡದ ಸಾಂಪ್ರದಾಯಿಕ ಕಲೆಗಳು ಹೆಚ್ಚು ಸಾಂಕೇತಿಕವಾದ ಬೋಧವನ್ನು ಹೊಂದಿವೆ.

7. ಇಲ್ಲಿಯ ಕಲೆಗಳು ತಾನ ಮತ್ತು ಲಯಗಳನ್ನು ಹೆಚ್ಚು ಬಳಸಿಕೊಳ್ಳುತ್ತದೆ. ಗೀತಕ್ಕಿಂತ ಸಂಗೀತದ ಬಳಕೆ, ಮೌನದ ತುಂಬ ಪರಿಣಾಮಕಾರಿ ಬಳಕೆ ಇಲ್ಲಿದೆ.

8 ಪುನರಭಿನಯತಂತ್ರ ಇಲ್ಲಿಯ ಕಲೆಗಳಲ್ಲಿ ಮುಖ್ಯ ಲಕ್ಷಣವಾಗಿ ಬರುತ್ತದೆ. ಹೂವಿನ ಮಕ್ಕಳ ಕುಣಿತ, ಬೇಡರವೇಷ, ಸುಗ್ಗಿಕುಣಿತ, ಹಗಣಗಳಲ್ಲಿ ಪುನರಭಿನಯದ ವಿವಿಧ ಮಾದರಿಗಳನ್ನು ಕಾಣಬಹುದಾಗಿದೆ.

9 ಬಹುತೇಕ ಜನಪದಕುಣಿತಗಳ ವಿನ್ಯಾಸದಂತೆ ಇಲ್ಲಿಯ ಜನಪದ ಕುಣಿತಗಳು ವೃತ್ತಾಕಾರವಾದ ವಿನ್ಯಾಸವನ್ನು ಹೊಂದಿದೆ.

10 ಉತ್ತರ ಕನ್ನಡದ ಸಾಂಪ್ರದಾಯಿಕ ಕುಣಿತಗಳಲ್ಲಿಯ ವೇಷ ಭೂಷಣಗಳು ಹೆಚ್ಚು ದಟ್ಟ ಬಣ್ಣದವುಗಳು ಅದರಲ್ಲಿಯೂ ಹಳದಿ ಮತ್ತು ಕೆಂಪು ಬಣ್ಣದವುಗಳೇ ಆಗಿವೆ. ಈ ದಟ್ಟ ಬಣ್ಣಗಳು ಹಗಲಿನಲ್ಲಿಯೂ ಅವರು ನರ್ತಿಸುವಾಗ ತುಂಬ ದೂರದವರೆಗೂ ಎದ್ದು ಕಾಣುತ್ತದೆ. ಉದಾಹರಣೆಗೆ ಹೂವಿನ ಮಕ್ಕಳ ಕುಣಿತವನ್ನು ನಾವು ಗಮನಿಸಬಹುದು. ಈ ಕುಣಿತದಲ್ಲಿ ಅವರು ಅಲಂಕರಿಸಿಕೊಳ್ಳುವ ಹೂವಿನ ಸರಗಳು ಕೆಂಪು ಮತ್ತು ಹಳದಿ ಬಣ್ಣದ್ದಾಗಿವೆ. ಬೇರೆ ವಾದ್ಯಗಳ ಸದ್ದಿಲ್ಲದೇ ಗೆಜ್ಜೆಕಟ್ಟಿದ ಹೆಜ್ಜೆಯ ಗತ್ತೊಂದನ್ನು ಮಾತ್ರ ಹೊಂದಿದ ಈ ಕುಣಿತ ತನ್ನ ಆಹಾರ್ಯದಿಂದಲೇ ಪ್ರದರ್ಶನೀಯವೆನಿಸುತ್ತದೆ. ಅದೇ ರೀತಿ ಸುಗ್ಗಿಕುಣಿತ, ಗೊಂಡರ ಕುಣಿತದಂತಹ ಹಲವುಬಗೆಯ ಕುಣಿತದಲ್ಲಿಯೂ ಸಹ ಈ ಬಣ್ಣಗಳ ಬಳಕೆಯನ್ನು ನಾವು ಗುರುತಿಸಬಹುದು. ಯಕ್ಷಗಾನದ ಮುಖವರ್ಣಿಕೆ, ವೇಷಭೂಷಣಗಳಲ್ಲಿಯೂ ಹಳದಿ ಮತ್ತು ಕೆಂಪುಬಣ್ಣಗಳ ಹೆಚ್ಚು ಬಳಕೆಇದೆ.

ಯಾವ ಬಣ್ಣದ ತರಂಗಾಂತರ ಹೆಚ್ಚಾಗಿರುತ್ತದೋ ಅದರ ಗಮನ ಸೆಳೆಯುವ ಸಾಮರ್ಥ್ಯವೂ ಹೆಚ್ಚಾಗಿರುತ್ತದೆ

. ಕೆಂಪು ಮತ್ತು ಹಳದಿಯ ತರಂಗಾಂತರ ಅತೀ ಹೆಚ್ಚಾಗಿರುತ್ತದೆ. ತರಂಗಾಂತರಗಳು ಕೆಂಪಲ್ಲಿ 67 ಮೈಕ್ರಾನ್, ಹಳದಿಯಲ್ಲಿ 58 ಮೈಕ್ರಾನ್, ಹಸಿರಿನಲ್ಲಿ 54 ಮೈಕ್ರಾನ್ ಇರುತ್ತದೆ. ಹಳದಿ ಮತ್ತು ಕೆಂಪು ಬಣ್ಣಗಳು ಬೆಚ್ಚನೆಯ ಅನುಭವ ನೀಡುತ್ತವೆ. ಈ ಬಣ್ಣಗಳು ಸೂರ್ಯನ ಬೆಳಕು , ಬೆಂಕಿ ಮತ್ತು ಶಾಖದೊಡನೆ ಪಡೆದಿರುವ ಸಂಬಂಧವೇ ಈ ಭಾವನೆ ಹುಟ್ಟಿಸುತ್ತವೆ ಎನ್ನಲಾಗಿದೆ. ಬೆಚ್ಚನೆಯ ಬಣ್ಣ ಜೀವಂತಿಕೆಗೆ, ಗೆಲುವಿಗೆ ಸಂಕೇತವಾಗಿ ಸಹ ಗುರುತಿಸಲ್ಪಟ್ಟಿದೆ.

ಬಹುತೇಕ ಎಲ್ಲ ಬಗೆಯ ಆಚರಣೆಗಳಲ್ಲಿಯೂ ಹಳದಿ ಮತ್ತು ಕೆಂಪು ಮುಖ್ಯ ಪಾತ್ರ ವಹಿಸುತ್ತದೆ. ಪಂಚವರ್ಣಗಳಲ್ಲೂ ಇದಕ್ಕೆ ಶ್ರೇಷ್ಠ ಸ್ಥಾನವಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಪ್ರಸಿದ್ಧವಾಗಿರುವ ಭೂತಾರಾಧನೆಯಲ್ಲಿ ಬಳಕೆಯಾಗುವ ಪುಷ್ಪಗಳುಸಹ ಹಳದಿ ಮತ್ತು ಕೆಂಪು ಬಣ್ಣದವೇ ಆಗಿವೆ.

ಆದಿಮ ಕಾಲದ ಚಿತ್ರಕಲೆಯಲ್ಲಿ ಸಹ ಇದೇ ಬಣ್ಣಗಳನ್ನು ಕಾಣಬಹುದು. ಮಧ್ಯ ಭಾರತದ ವಿಂಧ್ಯಪರ್ವತದ ರಾಯಘಡದಲ್ಲಿಯ ಗುಹಾ ಚಿತ್ರಗಳು, ಉತ್ತರ ಪ್ರದೇಶದ ಮಿರ್ಜಾಪುರ ಮುಂತಾದ ಸ್ಥಳಗಳಲ್ಲಿನ ಗುಹಾ ಚಿತ್ರಗಳು ಕೆಂಪು , ಹಳದಿ , ಮತ್ತು ಕಪ್ಪು ಬಣ್ಣದಲ್ಲಿ ಬರೆದ ಚಿತ್ರಗಳಾಗಿವೆ. ಭಾರತದ ಗುಹೆಗಳಲ್ಲಿಯ ಕಾಡು ಪ್ರಾಣಿಗಳ ಚಿತ್ರಗಳೆಲ್ಲ ಕೆಂಪು ಮತ್ತು ಅರಿಶಿನ ಬಣ್ಣಗಳಲ್ಲಿ ಬರೆದವುಗಳಾಗಿವೆ.

ನಂಬಿಕೆಯ ಅತ್ಯುನ್ನತ ಸ್ಥಿತಿಯಾದ ತಂತ್ರಶಾಸ್ತ್ರದಲ್ಲಿ ಸಹ ಕೆಂಪು ಮತ್ತು ಹಳದಿ ತುಂಬ ವಿಶೇಷವಾದ ಸ್ಥಾನ ಪಡೆದಿದೆ. ತಂತ್ರಶಾಸ್ತ್ರದಲ್ಲಿ ಅಕ್ಷರ ಮತ್ತು ರೇಖೆಗಳ ಒಂದೊಂದು ಆತ್ಮಕ್ಕೂ ಮತ್ತು ಒಂದೊಂದು ವಿಶೇಷ ಬಣ್ಣಗಳನ್ನು ಉಲ್ಲೇಖಿಸಲಾಗುತ್ತದೆ. ಉದಾಹರಣೆಗೆ "ಗಾಯತ್ರಿಯ ಮೊದಲ ವರ್ಣವು ಸಂಪಿಗೆಯಂತೆ ಹಳದಿಯಾಗಿದೆ . ಅದು ಅಗ್ನಿಯಿಂದ ಅರ್ಚಿತವಾಗಿದೆ. ಆದ್ದರಿಂದ ಅದು ಆಗ್ನೇಯ"[1]

ಹೀಗೆ ಉತ್ತರಕನ್ನಡದ ಸಾಂಪ್ರದಾಯಿಕ ರಂಗಕಲೆಗಳಲ್ಲಿ ಬಳಕೆಯಾಗುವ ಬಣ್ಣಗಳು ಆಚರಣೆಯ ದೃಷ್ಟಿಯಿಂದಲೂ ಹಾಗೂ ರಂಗತಂತ್ರದ ದೃಷ್ಟಿಯಿಂದಲೂ ಅಧ್ಯಯನಕ್ಕೆ ಬಹು ಮುಖ್ಯ ಆಕರಗಳಾಗಿವೆ.

## ಆಧಾರ ಪಠ್ಯ

1. ರಾಜಗೋಪಾಲ ಕ.ವೆಂ. (ಸಂ) : ತುಳುವರ ಆಚರಣೆಗಳಲ್ಲಿ ಕಲಾವಂತಿಕೆ : ಕರ್ನಾಟಕ ಲಲಿತಕಲಾ ಅಕಾಡೆಮಿ, ಬೆಂಗಳೂರು ; 1989. ಪು. 115.